ಓ.ಎಸ್. ನಂ. 119/2017
ಪಿ ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕ: 27-10-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮಧ್ಯಂತರ ಅರ್ಜಿಗಳ ಆದೇಶದ ಮೇರೆಗೆ ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ BAP ರವರಿಂದ</u>**

**1.** ದೊಡ್ಡರಂಗಪ್ಪನವರಿಗೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ದೊಡ್ಡರಂಗಪ್ಪನ ಮಕ್ಕಳು ವಿಭಾಗ ಮಾಡಿಕೊಂಡಿರುವುದಿಲ್ಲ. ದಾವಾ ಆಸ್ತಿಗಳು ಮೂಲತಃವಾಗಿ ದೊಡ್ಡರಂಗಪ್ಪನವರಿಗೆ ಸೇರಿದಂತಹ ಆಸ್ತಿಗಳಾಗಿರುತ್ತವೆ. ದೊಡ್ಡರಂಗಪ್ಪನ ಮಕ್ಕಳು ತೀರಿಕೊಂಡಿದ್ದು, ಅವರ ಮಕ್ಕಳು ಪ್ರತ್ಯೇಕವಾಗಿ ವಾಸಮಾಡಿಕೊಂಡಿದ್ದಾರೆ. ದೊಡ್ಡರಂಗಪ್ಪನ ಮಕ್ಕಳು ಯಾವಾಗ ಭಾಗ ಮಾಡಿಕೊಂಡಿರುತ್ತಾರೆ ಮತ್ತು ಯಾವ ಆಸ್ತಿಗಳು ಯಾರ ಭಾಗಕ್ಕೆ ಹೋಗಿರುತ್ತವೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸಿತಗಳು ನನ್ನ ತಾತಾನ ಭಾಗಕ್ಕೆ ಬಂದಿರುತ್ತವೆ ಎಂದು ತೋರಿಸುವ ಸಲುವಾಗಿ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಆಸ್ತಿಗಳ ಖಾತೆಗಳನ್ನು ನಮ್ಮ ಹೆಸರಿಗೆ ಬದಲಾವಣೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ. ದಾವಾ ಆಸ್ತಿಗಳು ಗಟ್ಲಹಳ್ಳಿ ಮತ್ತು ವೆಂಕಣ್ಣನಹಳ್ಳಿ ಗ್ರಾಮಕ್ಕೆ ಸೇರಿದಂತಹ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ.

2. ನನ್ನ ತಾತ ತಿಮ್ಮಯ್ಯ ನವರ ಹೆಸರಿಗೆ ಯಾವ ಆಸ್ತಿಗಳ ಖಾತೆಗಳು ಬಂದಿರುತ್ತವೆ ಎಂಬುದರ ಬಗ್ಗೆ ನನ್ನಿಂದ ಹೇಳಲಾಗುವುದಿಲ್ಲ. ದಾವಾ ಆಸ್ತಿಗಳ ಖಾತೆಗಳನ್ನು ಬದಲಾವಣೆ ಮಾಡಿಸಿಕೊಳ್ಳಲು ಹೋದಾಗ ನನ್ನ ತಾಯಿ ಗಲಾಟೆ ಮಾಡಿರುತ್ತಾರೆ. ದಾವಾ ಆಸ್ತಿಗಳನ್ನು ಅಳತೆ ಮಾಡಿಸಲು ದೊಡ್ಡರಂಗಪ್ಪನ ಮಕ್ಕಳು ಬಿಟ್ಟಿರುವುದಿಲ್ಲ. ದೊಡ್ಡರಂಗಪ್ಪನ ಮಕ್ಕಳು ವಿಭಾಗ ಮಾಡಿಕೊಂಡು ಅವರ ಹಿಸ್ಸೆಗೆ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದು, ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿ. ನಾನು ಅಳತೆ ಮಾಡಿಸಲು ಅರ್ಜಿಯನ್ನು ನೀಡಿರುವುದಿಲ್ಲ. ದಾವಾ ಆಸ್ತಿಗಳು ಬಿಟ್ಟು ದೊಡ್ಡರಂಗಪ್ಪನವರಿಗೆ ಸೇರಿದ ಇತರ ಆಸ್ತಿಗಳು ಇರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ದೊಡ್ಡರಂಗಪ್ಪನವರ ಮಕ್ಕಳಿಗೆ ಸೇರಿದ ಮನೆಗಳು ಇದ್ದವೋ ಇಲ್ಲವೋ ನನಗೆ ಗೊತ್ತಿಲ್ಲ. ದೊಡ್ಡರಂಗಪ್ಪನವರಿಗೆ ಸೇರಿದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದೆ, ಪ್ರತಿವಾದಿಗಳಿಗೆ ತೊಂದರೆ ನೀಡುವ ಸಲುವಾಗಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಓ.ಎಸ್. ನಂ. 119/2017
ಪಿ ಡಬ್ಲ್ಯೂ -1

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**